ಅಪರ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ
**ಸಿ.ಸಿ.ನಂ.5081-2019**

ಹೆಸರು : ರಾಘವೇಂದ್ರ
ತಂದೆ ಹೆಸರು : ಗೋಳವಿಂದರಾಜು ಶೆಟ್ಟಿ
ವಯಸ್ಸು : 53
ಉದ್ಯೋಗ : ವ್ಯಾಪಾರ
ವಾಸ : ದೇವನಹಳ್ಳಿ

ಸಿಡಬ್ಲೂ-4, ಪಿಡಬ್ಲೂ-1
ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.
ದಿನಾಂಕಃ 17-03-2026

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ

1 ಸಾಕ್ಷಿ ಮಹಜರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು 1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2019 ನೇ ಸಾಲಿನಲ್ಲಿ ರಾಣಿ ಕ್ರಾಸ್ ಬಳಿ ಇರುವ ನಂದಿ ಉಪಚಾರ್ ಬಳಿ ಅಪಘಾತದ ಹಿನ್ನಲೆಯಲ್ಲಿ ಪೋಲಿಸರು ಮಹಜರು ಮಾಡಲು ಬಂದಿದ್ದಾಗ ಬೆಳಿಗ್ಗೆ 07.30 ರಿಂದ 08.00 ಗಂಟೆ ಸಮಯಂಲ್ಲಿ ಮಾಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

ಮಹಜರಿಗೆ ಹಾಜರಾಗುವಂತೆ ಪೋಲಿಸರು ನನಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ. ನಾನು ಸಹಿ ಮಾಡಿರುವ ಸ್ಥಳ ಬೆಂಗಳೂರಿಂದ ಚಿಕ್ಕಬಳ್ಳಾಪುರಕ್ಕೆ ಹೋಗುವ ರಸ್ತೆ ಎಂದರೆ ಸರಿ. ಸದರಿ ಸ್ಥಳದಲ್ಲಿ ದಿನನಿತ್ಯ ಹಲವಾರು ವಾಹನಗಳು ಸಂಚಾ ರ ಮಾಾಡುತ್ತವೆ ಎಂದರೆ ಸರಿ. ಆ ಕಾರಣ ಅಲ್ಲಿ ಟ್ರಾಫಿಕ್ ಸಿಗ್ನಲ್ ಇದೆ ಎಂದರೆ ಆಗ ಇರಲಿಲ್ಲ. ಆ ಸ್ಥಳದಲ್ಲಿ ಚಾಯ್ ಮುಮೆಂಟ್ ಎಂಬ ಕಾಫಿ ಶಾಪ್ ಇದೆ ಎಂದರೆ ಸರಿ. ನಂದಿ ಉಪಚಾರ್ ಹೋಟೆಲ್ ಮತ್ತು ಚಾಯ್ ಮೂಮೆಂಟ್ ಕೆಪೆ ಬಳಿ ಸಿಸಿ ಟಿವಿ ಇದೆ ಎಂದರೆ ಆ ಬಗ್ಗೆ ಗೊತ್ತಿಲ್ಲ.ಈ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ನಾನು 2 ಬಾರಿ ಪೋಲಿಸ್ ಠಾಣೆಗೆ ಹೋಗಿದ್ದೇನೆ. ಆ ರೀತಿ ನಾನು ಠಾಣೆಗೆ ಹೋದಾಗ ನಿಪಿ-1 ಈ ಸಹಿ

ಮಾಡಿದ್ದೇನೆ ಎಂದರೆ ಸರಿ.  ನಾನು ಯಾವುದೇ ಪಂಚನಾಮೆಯಲ್ಲಿ ಭಾಗವಹಿಸಿಲ್ಲ ಆ ಬಗ್ಗೆ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆಃ ಇಲ್ಲ)

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ